ಮಿಸೆಸ್ ಫೋಸ್ಟರಳ ಪಾಲಿಗೆ ಇದೊಂದು ಬಹಳ ಮುಖ್ಯವಾದ ಪ್ರಯಾಣವಾಗಿತ್ತು. ಅವಳು ತನ್ನ ಒಬ್ಬಳೇ ಮಗಳ ಮನೆಗೆ, ಪ್ಯಾರಿಸಿಗೆ ಹೊರಟಿದ್ದಳು. ಅವಳು ಒಬ್ಬ ಫ್ರೆಂಚ್ ವ್ಯಕ್ತಿಯನ್ನು ಮದುವೆಯಾಗಿ ಅಲ್ಲೇ ನೆಲೆಸಿದ್ದಳು. ಮಿಸ್ಟರ್ ಫೋಸ್ಟರನಿಗೆ ಫ್ರೆಂಚ್ ಅಳಿಯನ ಮೇಲೆ ಅಷ್ಟೊಂದು ಆದರವಿರಲಿಲ್ಲ. ಆದರೆ ಮಿಸೆಸ್ ಫೋಸ್ಟರಳು ಮಾತ್ರ ಮಗಳನ್ನು, ಅದರಲ್ಲೂ ಮೂವರು ಮೊಮ್ಮಕ್ಕಳನ್ನು ನೋಡಬೇಕೆಂದು ಹಾತೊರೆಯುತ್ತಿದ್ದಳು. ಮುದ್ದಾದ ಮಕ್ಕಳು. ಪ್ರತಿಬಾರಿಯೂ ಮಕ್ಕಳ ಹೊಸ ಹೊಸ ಭಾವಚಿತ್ರಗಳು ಬಂದಾಗ ಅವುಗಳನ್ನು ಹಿಡಿದು ಮಿಸೆಸ್ ಫೋಸ್ಟರ್ ಗಂಟೆಗಟ್ಟಲೆ ಕೂತಿರುತ್ತಿದ್ದಳು. ಆ ಮುಗ್ಧ ಮಕ್ಕಳ ಸುಂದರ ಮುಖಗಳ ಮೇಲೆ ತನ್ನ ನೆರಳೇನಾದರೂ ಕಾಣಿಸುತ್ತಿದೆಯೋ ಎಂದು ಹುಡುಕುತ್ತಾ ಕಾಲ ಕಳೆಯುತ್ತಿದ್ದಳು. ಇತ್ತೀಚೆಗಂತೂ, ಯಾವಾಗೊಮ್ಮೆ ಮೊಮ್ಮಕ್ಕಳನ್ನು ಕಾಣುತ್ತೇನೋ, ಅವರನ್ನು ಅಪ್ಪಿ ಮುದ್ದುಗರೆಯುತ್ತೇನೋ, ಅವರನ್ನು ತಿರುಗಾಡಿಸಲು ಕರೆದೊಯ್ಯುತ್ತೇನೋ ಎಂದೇ ಜಪಿಸುತ್ತಿದ್ದಳು. ಕಣ್ಣ ಮುಂದೆ ಮಗಳು, ಮೊಮ್ಮಕ್ಕಳು ಇಲ್ಲದಿದ್ದರೆ ಜೀವಿಸುವುದೇ ದುಸ್ತರವೆಂದು ಅವಳಿಗೆ ಅನಿಸತೊಡಗಿತ್ತು. ಗಂಡ ಜೀವಿಸಿರುವವರೆಗೆ ಅವನನ್ನು ಬಿಟ್ಟು ಮಗಳೊಟ್ಟಿಗೆ ಇರುವುದಂತೂ ಸಾಧ್ಯವಿರಲಿಲ್ಲ. ಮಿಸ್ಟರ್ ಫೋಸ್ಟರ್ ಹೆಚ್ಚುಕಮ್ಮಿ ನಿವೃತ್ತಜೀವನ ನಡೆಸುತ್ತಿದ್ದನಾದರೂ, ಪ್ಯಾರಿಸಿನಲ್ಲಿರಲು ಖಂಡಿತಾ ಒಪ್ಪುತ್ತಿರಲಿಲ್ಲ. ಅದು ಅವಳಿಗೆ ಚೆನ್ನಾಗಿ ಗೊತ್ತಿತ್ತು. ಅವಳಿಗೊಬ್ಬಳಿಗೇ ಪ್ಯಾರಿಸಿಗೆ ಹೋಗಲು ಹಾಗೂ ಆರುವಾರಗಳ ಕಾಲ ಮಗಳೊಟ್ಟಿಗಿರಲು ಅವನು ಅನುಮತಿ ಕೊಟ್ಟಿದ್ದೇ ಒಂದು ಪವಾಡವೆನ್ನಬಹುದಿತ್ತೇನೋ! ಅವಳು ಇದನ್ನು ಕನಸಿನಲ್ಲೂ ಊಹಿಸಿರಲಿಲ್ಲ.

'ವಾಕರ್, ಟೈಮೆಷ್ಟಾಯ್ತು ಎಂದೆ?' ಅವಳು ಮತ್ತೊಮ್ಮೆ ಕೇಳಿದಳು.

'ಒಂಬತ್ತು ಇಪ್ಪತ್ತೆರಡು ಮೇಡಂ.'

ಅಷ್ಟರಲ್ಲಿ ಲೈಬ್ರೆರಿಯ ಬಾಗಿಲು ತೆರೆದು ಮಿಸ್ಟರ್ ಫೋಸ್ಟರ್ ಡ್ರಾಯಿಂಗ್ ರೂಮಿಗೆ ಕಾಲಿಟ್ಟರು. ಹೆಂಡತಿಯ ಕಡೆಗೊಮ್ಮೆ ತೀಕ್ಷ್ಣ ನೋಟ ಬೀರಿದರು. ದೈಹಿಕವಾಗಿ ಅಷ್ಟೇನು ಬಲಶಾಲಿಯಾಗಿರದಿದ್ದರೂ ಗಡ್ಡ ಬಿಟ್ಟ ಅವರ ಮುಖದಲ್ಲಿ ಅಧಿಕಾರ, ದರ್ಪ ಎದ್ದು ಕಾಣಿಸುತ್ತಿತ್ತು.

'ಎಲ್ಲಾ ತಯಾರಾಗಿದೆಯಾ? ನಾವು ಬೇಗ ಹೊರಡೋಣ. ತಡವಾದೀತು.'

'ಎಲ್ಲಾ ತಯಾರಾಗಿದೆ ಡಿಯರ್. ಕಾರೂ ರೆಡಿಯಾಗಿದೆ. ಲಗೇಜೂ ತುಂಬಿಸಿಯಾಗಿದೆ.'

'ವೆರಿ ಗುಡ್!' ಎನ್ನುತ್ತಾ ಮಿಸ್ಟರ್ ಫೋಸ್ಟರ್ ಅವಳನ್ನು ಮತ್ತೊಮ್ಮೆ ದೃಷ್ಟಿಸಿದರು.

'ವಾಕರ್ ನಿಮ್ಮ ಕೋಟು ತಂದಿದ್ದಾನೆ ಡಿಯರ್. ತೊಟ್ಟುಕೊಳ್ಳಿ.' ಅವಳು ಅವಸರಿಸಿದಳು.

'ಒಂದ್ನಿಮಿಷ ಡಾರ್ಲಿಂಗ್... ಒಮ್ಮೆ ಕೈ ತೊಳೆದುಕೊಂಡು ಬರುತ್ತೇನೆ.'

ಅವಳು ಕಾದಳು. ಕೈಯಲ್ಲಿ ಕೋಟು ಮತ್ತು ಹ್ಯಾಟನ್ನು ಹಿಡಿದುಕೊಂಡು ಬಟ್ಲರನೂ ಅವಳ ಬಗಲಲ್ಲಿ ನಿಂತುಕೊಂಡ.

'ವಾಕರ್, ನನ್ನ ಫ್ಲೇನು ತಪ್ಪಿ ಹೋಗುತ್ತದೋ ಏನು?' ಅವಳು ಆತಂಕದಿಂದ ಮತ್ತೊಮ್ಮೆ ಕೇಳಿದಳು. 'ಖಂಡಿತ ಇಲ್ಲ ಮೇಡಂ.' ವಾಕರ್ ಧೈರ್ಯ ತುಂಬಿಸಿದ.

ಅಷ್ಟರಲ್ಲಿ ಮಿಸ್ಟರ್ ಫೋಸ್ಟರ್ ಬಂದರು. ಅವರಿಗೆ ಕೋಟನ್ನು ತೊಡಿಸಲು ವಾಕರ್ ಸಹಾಯ ಮಾಡಿದ. ಮಿಸೆಸ್ ಪೋಸ್ಟರ್ ಹೊರಗೆ ಕಾಯುತ್ತಿದ್ದ ಬಾಡಿಗೆಯ ಕ್ಯಾಡಿಲಾಕ್ ಕಡೆಗೆ ತ್ವರಿತವಾಗಿ ಹೆಜ್ಜೆ ಹಾಕತೊಡಗಿದಳು. ಮಿಸ್ಟರ್ ಫೋಸ್ಟರ್ ಕಿಂಚಿತ್ತೂ ಅವಸರಪಡದೆ